# ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರು ಕಛೇರಿ, ಹೊಸ ಸಾರ್ವಜನಿಕ ಕಛೇರಿ
ಪೂರಕ ಕಟ್ಟಡಗಳು ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560001


ಸಂಖ್ಯೆ: ಸ.ಶಿ.ಅ/ಪ್ರಾ.ಪ್ರೌ.ಶಾಲೆ/ಶಾ.ಅನುದಾನ/02/2019-20 ದಿನಾಂಕ: 22/09/2020

## ಮಾರ್ಗಸೂಚಿ

ವಿಷಯ: 2020-21ನೇ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ ಅನುಮೋದಿತ ಕಾರ್ಯಚಟುವಟಿಕೆ ಶಾಲಾನುದಾನದಡಿ ಅನುದಾನ ಬಿಡುಗಡೆಗೊಳಿಸಿರುವ ಬಗ್ಗೆ.

ಉಲ್ಲೇಖ: ದಿನಾಂಕ 19.05.2020 ರಂದು ನಡೆದ ಪಿ.ಎ.ಬಿ ಸಭೆಯ ಶಿಫಾರಸ್ಸಿನಂತೆ.

**********

2020-21ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ಅನುಮೋದಿತ ಚಟುವಟಿಕೆ ಶಾಲಾ ಅನುದಾದಡಿಯಲ್ಲಿ ಲಭ್ಯವಿರುವ ಅನುದಾನದಡಿಯಲ್ಲಿ ಮೊದಲ ಹಂತವಾಗಿ ವಿದ್ಯಾರ್ಥಿಗಳ ಸಂಖ್ಯೆಯಾಧರಿಸಿ ಪಿ.ಎ.ಪಿ ಅನುಮೋದನೆಯಂತೆ ಪ್ರಾಥಮಿಕ ಶಾಲೆಗಳಿಗೆ ರೂ., **2509.153** ಲಕ್ಷಗಳು ಗಳನ್ನು ಮತ್ತು ಪ್ರೌಢ ಶಾಲೆಗಳಿಗೆ ರೂ., **450.47** ಲಕ್ಷಗಳು ಗಳನ್ನು ನೇರವಾಗಿ ಶಾಲೆಗಳಿಗೆ ಬಿಡುಗಡೆಗೊಳಿಸಲಾಗಿದೆ.

ಮಕ್ಕಳ ಸಂಖ್ಯೆಯನ್ನಾಧರಿಸಿ ಪ್ರತಿ ಶಾಲೆಗೆ ವಾರ್ಷಿಕ ಅನುಮೋದಿತ ಮೊತ್ತ ಮತ್ತು ಮೊದಲ ಹಂತದಲ್ಲಿ ಬಿಡುಗಡೆಗೊಳಿಸಿರುವ ಅನುದಾನದ ವಿವರ:-

**ಕೋಷ್ಟಕ-1**

| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ನಿಗದಿಪಡಿಸಿದ ಮೊತ್ತ ರೂ.ಗಳಲ್ಲಿ | ಮೊದಲ ಹಂತದಲ್ಲಿ ಬಿಡುಗಡೆಗೊಳಿಸಲಾಗಿರುವ ಮೊತ್ತ. |
|---|---|---|---|
| 1 | 1 ರಿಂದ 15 ಮಕ್ಕಳಿರುವ ಶಾಲೆಗಳು | 12,500/- | 2409-00 |
| 2 | 16 ರಿಂದ 100 ಮಕ್ಕಳಿರುವ ಶಾಲೆಗಳು | 25,000/- | 4818-00 |
| 3 | 101 ರಿಂದ 250 ಮಕ್ಕಳಿರುವ ಶಾಲೆಗಳು | 50,000/- | 9635-00 |
| 4 | 251 ರಿಂದ 1000 ಮಕ್ಕಳಿರುವ ಶಾಲೆಗಳು | 75,000/- | 14453-00 |
| 5 | 1000 ಕ್ಕಿಂತ ಹೆಚ್ಚು ಮಕ್ಕಳಿರುವ ಶಾಲೆಗಳು | 1,00,000/- | 19270-00 |

ವಾರ್ಷಿಕವಾಗಿ ನಿಗದಿಯಾಗಿರುವ ಶಾಲಾ ಅನುದಾನದಲ್ಲಿ ವಿವಿದ ಬಾಬ್ತುಗಳಿಗೆ ಬಳಕೆ ಮಾಡಬೇಕಾದ ಅನುದಾನದ ವಿವರ:

## ಕೋಷ್ಟಕ-2

| ಕ್ರ.ಸಂ. | ವಿವರ | 12500/- ಅನುದಾನ ಬಿಡುಗಡೆಯಾದ ಶಾಲೆಗಳು( ಮಕ್ಕಳ ಸಂಖ್ಯೆ 1 ರಿಂದ 15) | 25000/- ಅನುದಾನ ಬಿಡುಗಡೆಯಾದ ಶಾಲೆಗಳು( ಮಕ್ಕಳ ಸಂಖ್ಯೆ 16 ರಿಂದ 100) | 50000/- ಅನುದಾನ ಬಿಡುಗಡೆಯಾದ ಶಾಲೆಗಳು( ಮಕ್ಕಳ ಸಂಖ್ಯೆ 101 ರಿಂದ 250) | 75000/- ಅನುದಾನ ಬಿಡುಗಡೆಯಾದ ಶಾಲೆಗಳು( ಮಕ್ಕಳ ಸಂಖ್ಯೆ 251 ರಿಂದ 1000) | 100000/- ಅನುದಾನ ಬಿಡುಗಡೆಯಾದ ಶಾಲೆಗಳು( ಮಕ್ಕಳ ಸಂಖ್ಯೆ 1000 ಕ್ಕಿಂತ ಹೆಚ್ಚು) |
|---|---|---|---|---|---|---|
| 1 | ಕಛೇರಿಯ ದಾಖಲೆ ಪುಸ್ತಕಗಳು (ದಾಖಲಾತಿ ಪುಸ್ತಕ, ಹಾಳೆಗಳು, ಹಾಜರಾತಿ ಪುಸ್ತಕ, ವಗಾವಣೆ ಪತ್ರ, ಅಂಕಪಟ್ಟಿ, ಇತರೆ.) | 1000.00 | 2000.00 | 3000.00 | 5000.00 | 6000.00 |
| 2 | ತರಗತಿಗೆ ಅಗತ್ಯವಿರುವ ಅಂಕಪಟ್ಟಿ ಇತರೆ (ಸೀಮೆಸುಣ್ಣ, ಡಸ್ಟರ್, ಇತರೆ) | 1250.00 | 2000.00 | 3500.00 | 5000.00 | 10000.00 |
| 3 | ಬೋದನೋಪಕರಣಗಳ ತಯಾರಿಕೆ | 1000.00 | 2000.00 | 4000.00 | 5000.00 | 6000.00 |
| 4 | ಬೋದನೋಪಕರಣಗಳ ಖರೀದಿ | 2000.00 | 3000.00 | 6000.00 | 6000.00 | 6000.00 |
| 5 | ಕಟ್ಟಡದ ಸಣ್ಣ-ಪುಟ್ಟ ದುರಸ್ತಿ (ಬಾಗಿಲು, ಕಿಟಕಿ, ಶೌಚಾಲಯ) | 0.00 | 3500.00 | 10000.00 | 20000.00 | 25000.00 |
| 6 | ಶುದ್ಧ ಕುಡಿಯುವ ನೀರಿನ ವ್ಯವಸ್ಥೆ | 2000.00 | 1000.00 | 3000.00 | 4000.00 | 6000.00 |
| 7 | ಪೀಠೋಪಕರಣಗಳ ದುರಸ್ತಿ | 00.00 | 3000.00 | 4000.00 | 4000.00 | 5000.00 |
| 8 | ಕ್ರೀಡಾ ಸಾಮಗ್ರಿಗಳ ಖರೀದಿ/ದುರಸ್ತಿ | 1000.00 | 2000.00 | 4000.00 | 6000.00 | 10000.00 |
| 9 | ವಿದ್ಯುತ್/ ದೂರವಾಣಿ ಬಿಲ್ ಪಾವತಿ | 2000.00 | 3000.00 | 6000.00 | 10000.00 | 12000.00 |
| 10 | ದಿನಪತ್ರಿಕೆ ಮತ್ತು ವಾರ ಪತ್ರಿಕೆ ವೆಚ್ಚ | 1000.00 | 1000.00 | 1500.00 | 2500.00 | 4000.00 |
| 11 | ಶಾಲಾ ಸ್ವಚ್ಚತಾ ವೆಚ್ಚ (ಶೌಚಾಲಯ ನಿರ್ವಹಣೆ) | 1250.00 | 2500.00 | 5000.00 | 7500.00 | 10000.00 |
| ಒಟ್ಟು ಮೊತ್ತ | | **12500.00** | **25000.00** | **50000.00** | **75000.00** | **100000.00** |

ಕೋಷ್ಟಕದಲ್ಲಿ ನೀಡಲಾದ ಚಟುವಟಿಕೆಗಳಿಗೆ ಮಾತ್ರ ಶಾಲಾನುದಾವನ್ನು ವೆಚ್ಚ ಮಾಡತಕ್ಕದ್ದು. ರಾಜ್ಯ ಯೋಜನಾ ಕಛೇರಿಯಿಂದ ಬಿಡುಗಡೆಯಾಗುವ ಶಾಲಾನುದಾನವನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣ ಪ್ರಮಾಣದಲ್ಲಿ ವೆಚ್ಚ ಮಾಡತಕ್ಕದ್ದು.

ಮಾರ್ಚ್ ಅಂತ್ಯಕ್ಕೆ ರಾಜ್ಯ ಯೋಜನಾ ಕಛೇರಿಯಿಂದ ಬಿಡುಗಡೆಯಾದ ಶಾಲಾನುದಾನ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ತಾಲ್ಲೂಕು ಹಂತದಲ್ಲಿ ಮುಖ್ಯಶಿಕ್ಷಕರ ಸಭೆ ನಡೆಸಿ ಸುತ್ತೋಲೆಯ ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು / ಕ್ಷೇತ್ರ ಸಮನ್ವಯಾಧಿಕಾರಿಗಳು ಒದಗಿಸುವುದು. ವಿವಿಧ ಹಂತದ ಅಧಿಕಾರಿಗಳು ಭೇಟಿಯ ಸಂದರ್ಭದಲ್ಲಿ ಶಾಲೆಗಳಲ್ಲಿ ಸುತ್ತೋಲೆ ನೀಡಿರುವುದನ್ನು ಪರಿಶೀಲಿಸುವುದು.

**ಶಾಲಾನುದಾನದಲ್ಲಿ ಕನಿಷ್ಟ ಶೇಕಡಾ 10 ರಷ್ಟು ಅನುದಾನವನ್ನು ಶಾಲಾ ಸ್ವಚ್ಛತಾ ಚಟುವಟಿಕೆಗಳಿಗೆ** ಬಳಸಿಕೊಳ್ಳುವುದು. ಶಾಲೆಯ ಕೊಠಡಿ, ಆವರಣ ಸ್ವಚ್ಛತೆ ಬಗ್ಗೆ ಶಾಲಾ ಮುಖ್ಯ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು. ಶಾಲಾ ಎಸ್.ಡಿ.ಎಂ.ಸಿ. ಸಭೆಯನ್ನು ಏರ್ಪಡಿಸಿ, ಚರ್ಚಿಸಿ, ಅಗತ್ಯವಿರುವ ಸ್ವಚ್ಛತಾ ವಸ್ತುಗಳನ್ನು ಖರೀದಿಸುವುದು ಮತ್ತು ಶಾಲಾನುದಾನವನ್ನು ವೆಚ್ಚ ಮಾಡುವ ಬಗ್ಗೆ ಚರ್ಚಿಸುವುದು.

ಶಾಲಾನುದಾನದ ಖರ್ಚು–ವೆಚ್ಚದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಉಪಯೋಗಿತ ಪ್ರಮಾಣ ಪತ್ರವನ್ನು ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಜಿಲ್ಲೆಯವರು ಶಾಲೆಯ ಕ್ರೋಢೀಕರಣ ಪ್ರಮಾಣ ಪತ್ರವನ್ನು ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

**ಮೇಲ್ವಿಚಾರಣೆ:–**

**ಕ್ಲಸ್ಟರ್ ಹಂತದಲ್ಲಿ ಸಿ.ಆರ್.ಪಿ/ಬಿ.ಆರ್.ಪಿ:**

ಸಿ.ಆರ್.ಪಿ ಗಳು ಶಾಲೆಗಳಿಗೆ ಖುದ್ದು ಭೇಟಿ ನೀಡಿ, ಶಾಲಾನುದಾನದ ವೆಚ್ಚದ ಬಗ್ಗೆ ಪರಿಶೀಲಿಸಿ ಪ್ರತೀ ತಿಂಗಳ ವೆಚ್ಚದ ಬಗ್ಗೆ ಕ್ಲಸ್ಟರ್ ಹಂತದಲ್ಲಿ ಕ್ರೋಢೀಕರಿಸಿ ಮಾಹಿತಿಯನ್ನು ಬಿ.ಆರ್.ಸಿ ಕಛೇರಿಗೆ ಪ್ರತೀ ತಿಂಗಳ 5ನೇ ದಿನಾಂಕದೊಳಗಾಗಿ ಸಲ್ಲಿಸುವುದು.

**ತಾಲ್ಲೂಕು ಹಂತದಲ್ಲಿ ಬಿ.ಇ.ಒ/ಬಿ.ಆರ್.ಸಿ**

ಬಿ.ಇ.ಒ/ಬಿ.ಆರ್.ಸಿ. ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಸಭೆಗಳನ್ನು ಆಯೋಜಿಸಿ ಶಾಲಾನುದಾನದ ಕ್ರೋಢೀಕೃತ ಮಾಹಿತಿಯನ್ನು ಜಿಲ್ಲಾ ಕಛೇರಿಗೆ ಪ್ರತೀ ತಿಂಗಳ 10ನೇ ದಿನಾಂಕದೊಳಗಾಗಿ ಸಲ್ಲಿಸುವುದು.

ಜಿಲ್ಲಾ ಹಂತದಲ್ಲಿ:

ಉಪನಿರ್ದೇಶಕರು ಆಡಳಿತ ಬಿ.ಇ.ಓ. ಮತ್ತು ಬಿ.ಆರ್.ಸಿ ಸಭೆಯನ್ನು ಆಯೋಜಿಸಿ ಇಲಾಖಾ ವಿಷಯಗಳ ಚರ್ಚೆಯೊಂದಿಗೆ ಶಾಲಾನುದಾನದ ಬಗ್ಗೆ ಚರ್ಚಿಸಿ ಜಿಲ್ಲಾ ಕ್ರೋಢೀಕೃತ ಮಾಹಿತಿಯನ್ನು ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗೆ ಪ್ರತೀ ತಿಂಗಳ 15 ದಿನಾಂಕದೊಳಗಾಗಿ ಸಲ್ಲಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

**ಪ್ರತಿಗಳನ್ನು ಗೌರವಪೂರ್ವಕವಾಗಿ:**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

**ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:**

1. ಸಂಬಂಧಿಸಿದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ,
2. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ.
3. ಸಂಬಂಧಿಸಿದ ಎಲ್ಲಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು ಎಲ್ಲಾ ಶಾಲೆಗಳಿಗೆ ಮಾರ್ಗಸೂಚಿಯ ಪ್ರತಿಯನ್ನು ಸಲ್ಲಿಸಿ ವೆಚ್ಚಗಳ ಬಗ್ಗೆ ನಿಗಾವಹಿಸಿ ಮೇಲ್ವಿಚಾರಣೆ ಮಾಡುವುದು.
4. ಕಛೇರಿ ಪ್ರತಿ.